<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>

<u>ಸತ್ರ ಮೊಕದ್ದಮೆ ಸಂಖ್ಯೆ: **106/2021**</u>

ಪಿ.ಡಬ್ಲ್ಯು: **12** ಸಿಡಬ್ಲ್ಯು: **18**

ಸಾಕ್ಷಿಯ ಹೆಸರು : ಮಂಜುನಾಥ

ತಂದೆಯಹೆಸರು : ಮಲ್ಲಿಕಾರ್ಜುನ ಸ್ವಾಮಿ

ವಯಸ್ಸು : **32** ವರ್ಷ

ವೃತ್ತಿ : ಬಾರ್ ನಲ್ಲಿ ವೆಂಡರ್ ಕೆಲಸ

ವಾಸಸ್ಥಳ : ಮೋಕಾ ಗ್ರಾಮ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: **20-07-2024**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

ನಾನು ಈಗ ನೋಡುತ್ತಿರುವ ನಿಪಿ-12 ಮಹಜರನಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು.

ದಿ: 01-08-2021 ರಂದು ಸಂಜೆ: 3-30 ರ ಮೇಲೆ 4-00 ಗಂಟೆ ಸಮಯದಲ್ಲಿ ಪೊಲೀಸರು ನಮ್ಮ ರುಚಿ ಬಾರ್ ಅಂಡ್ ರಸ್ಟೋರೆಂಟ್ ಗೆ ಬಂದಿದ್ದರು. ಅಲ್ಲಿ ಸಿ ಸಿ ಕ್ಯಾಮರಾಗಳನ್ನು ಪರಿಶೀಲಿಸಿದ್ದರು. ಅರಣ್ಯದಲ್ಲಿ ಯಾರದ್ದು ಹತ್ಯೆ ಆಗಿದ್ದರಿಂದ ನಮ್ಮ ಬಾರ್ ದಿಂದ ಮದ್ಯ ಖರೀದಿಸಿದ ಬಗ್ಗೆ ಪೊಲೀಸರು ಸಿ ಸಿ ಕ್ಯಾಮರಾಗಳನ್ನು ಪರಿಶೀಲಿಸಿದರು. ಪೊಲೀಸರು ಸಿ ಸಿ ಕ್ಯಾಮರಾದ ದೃಶ್ಯವಳಿಗಳನ್ನು ಪೆನ್ ಡ್ರೈವ್ ನಲ್ಲಿ ಹಾಕಿಕೊಂಡು ತೆಗೆದುಕೊಂಡು ಹೋದರು. ಆ ಸಮಯದಲ್ಲಿ ಪೊಲೀಸರು ಜೊತೆ ಇಬ್ಬರು ಬಂದಿದ್ದರು. ಅವರು ಯಾರು ಎಂದು ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ಸಹಿಯನ್ನು ಪೊಲೀಸರು ನಿಪಿ-12 ರಲ್ಲಿ ಪಡೆದುಕೊಂಡಿದ್ದರು. ನಿಪಿ-12 ರಲ್ಲಿ ಬರೆದುಕೊಂಡ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. 1 ನೇ ಆರೋಪಿಯನ್ನು ನಾನು ನೋಡಿಲ್ಲ. ಆತ ನನಗೆ ಪರಿಚಯ ಎಂದು ಮತ್ತು ಆತ ಆಗಾಗ್ಗೆ ಬಂದು ಮದ್ಯ ಖರೀದಿ ಮಾಡುತ್ತಿದ್ದ ಎಂದು ಮತ್ತು ದಿ: 01-08-

2021 ರ 3-4 ದಿನಗಳ ಹಿಂದೆ ಸಹ ನಮ್ಮ ಅಂಗಡಿಗೆ ಬಂದಿದ್ದ ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).**

**<u>ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:</u>**

ಪೊಲೀಸರು ದಿ **01-08-2021** ರಂದು ನಮ್ಮ ಅಂಗಡಿಗೆ ಪಂಚನಾಮೆ ಮಾಡಲು ಬಂದಿದ್ದರು ಎಂದರೆ ಸರಿ. ನಾನು ನಮ್ಮ ಬಾರ್ ನಲ್ಲಿ ಅಳವಡಿಸಿದ ಚಾಲ್ತಿಯಲ್ಲಿದ್ದ **5** ಸಿ ಸಿ ಕ್ಯಾಮರಾಗಳ ದೃಶ್ಯಾವಳಿಯನ್ನು ಟೀವಿಯಲ್ಲಿ ಪ್ಲೇ ಮಾಡಿ ಪೊಲೀಸರಿಗೆ ತೋರಿಸಿದ್ದೆ ಎಂದರೆ ಸರಿಯಲ್ಲ. ಸದರಿ ದೃಶ್ಯಾವಳಿಯಲ್ಲಿ ಆರೋಪಿ **1** ಕಂಡು ಬಂದಿದ್ದ ಮತ್ತು ನಾನು ಆತನನ್ನು ಗುರುತಿಸಿದ್ದೆ ಎಂದರೆ ಸರಿಯಲ್ಲ. ಪೊಲೀಸರು ಸದರಿ ದೃಶ್ಯಾವಳಿಯನ್ನು ಪೆನ್ ಡ್ರೈವ್ ನಲ್ಲಿ ಸಂಗ್ರಹಿಸಿ , ಲ್ಯಾಪ್ ಟ್ಯಾಪ್ ಮೂಲಕ ಸಿ ಡಿಯಲ್ಲಿ ರೈಟ್ ಮಾಡಿಕೊಂಡು ತೆಗೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಮಃ **3-00** ಗಂಟೆಯಿಂದ **4-30** ರ ವರೆಗೆ ಸದರಿ ಸ್ಥಳದಲ್ಲಿ ನನಗೆ ಈಗ ಓದಿ ಹೇಳಿದಂತೆ ನಿಪಿ-**12** ರಂತೆ ಪೊಲಿಸರು ಮಹಜರ್ ನ್ನು ಮಾಡಿ ಅದರನ್ನು ಬರೆದು ಓದಿ ಹೇಳಿದ ನಂತರ ನಾನು ಅದಕ್ಕೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

ದಿಃ **01-08-2021** ರಂದು ನಾನು ಪೊಲೀಸರ ಮುಂದೆ ಈ ಪ್ರಕರಣದಲ್ಲಿ ನನಗೆ ಈಗ ಓದಿ ಹೇಳಿದಂತೆ "ನಾನು ಮೇಲ್ಕಂಡ ವಿಳಾಸದಲ್ಲಿ --------- ಬಳ್ಳಾರಿ ರವರು ಪಡೆದುಕೊಂಡರು " ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿದ ಹೇಳಿದ ಹೇಳಿಕೆಯನ್ನು ನಿಪಿ-**22** ಎಂದು ಗುರುತಿಸಲಾಯಿತು. ನಿಪಿ-**22** ರಂತೆ

ಹೇಳಿಕೆ ಕೊಟ್ಟಿದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು 1 ರಿಂದ 3 ನೇ ಆರೋಪಿತ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.